**ಪ್ರಧಾನ ಸಿವಿಲ್ ಮತ್ತು ಜೆಎಂಎಫಸಿ ನ್ಯಾಯಾಧೀಶರ ನ್ಯಾಯಾಲಯ, ಸಂಕೇಶ್ವರ**

**ಸಿ.ಸಿ. ಸಂಖ್ಯೆ:1904/2022**

**ಪಿರ್ಯಾದಿ** : ಸಂಕೇಶ್ವರ ಪೋಲೀಸ್ ಠಾಣೆ

**ವಿರುದ್ಧ**

**ಆರೋಪಿ** : ಮಲ್ಲಿಕಾರ್ಜುನ ಪರಶುರಾಮ ಕೆರೂರ.

**::ದೋಷಾರೋಪಣೆ::**

**ನೇಮಚಂದ್ರ ಎಲ್ ಎಲ್ ಎಂ, ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ.ಸಿ., ನ್ಯಾಯಾಧೀಶರು, ಸಂಕೇಶ್ವರ,** ಆದ ನಾನು ಆರೋಪಿಯಾದ

ಮಲ್ಲಿಕಾರ್ಜುನ ಪರಶುರಾಮ ಕೆರೂರ.
ವಃ 34 ವರ್ಷ, ಉಃ ಡೋಬಿ ಕೆಲಸ,
ವಾಸಃ ಅನಂತ ವಿದ್ಯಾನಗರ, ಸಂಕೇಶ್ವರ,
ತಾಃ ಹುಕ್ಕೇರಿ, ಜಿಃ ಬೆಳಗಾವಿ.

ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸುತ್ತಿದ್ದೇನೆ**.**

**ಮೊದಲನೆಯದಾಗಿ,** ಆರೋಪಿಯಾದ ನೀವು, (ಚಾಸಾ.1) ಆಶಾ ಮಲ್ಲಿಕಾರ್ಜುನ ಕೆರೂರ ರವರ ಗಂಡನಾಗಿದ್ದು, ಮದುವೆಯಾದ ಒಂದು ವರ್ಷಗಳ ನಂತರ ನಿಮ್ಮ ಹೆಂಡತಿಯಾದ ಚಾಸಾ.1 ರವರಿಗೆ ನಿನಗೆ ಬೇರೆಯವರೊಂದಿಗೆ ಸಂಬಂಧ ಇದೆ, ನೀನು ಸರಿ ಇಲ್ಲಾ ಅಂತಾ ಹಿಂಸೆ ಕೊಡುತ್ತಿದುದಲ್ಲದೇ, ಸಾರಾಯಿ ಕುಡಿದು ಬಂದು ಅವಾಚ್ಯವಾಗಿ ಬೈಯುತ್ತಾ, ಹೊಡೆಯುತ್ತಾ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ 498(ಎ) ರಡಿಯಲ್ಲಿ ಈ ಒಂದು ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

**ಎರಡನೆಯದಾಗಿ,** ದಿನಾಂಕಃ23.01.2022 ರಂದು ಮುಂಜಾನೆ 10.00 ಗಂಟೆಗೆ ಮಾನ್ಯ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಸಂಕೇಶ್ವರ ಪೋಲೀಸ್ ಠಾಣಾ ಹದ್ದಿಯ ಸಂಕೇಶ್ವರ ಪಟ್ಟಣದ ಅನಂತ ವಿದ್ಯಾನಗರದಲ್ಲಿ ಚಾಸಾ.1 ರವರ ತಲೆ ಕೂದಲನ್ನು ಹಿಡಿದು ಎಳೆಯುತ್ತಾ ರಸ್ತೆಗೆ ಎಳೆದುಕೊಂಡು ಬಂದು ಕೈಯಿಂದ ಹೊಡೆಬಡಿ ಮಾಡಿ ಸಾದಾಗಾಯ ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ 323 ರಡಿಯಲ್ಲಿ ಈ ಒಂದು ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

**ಕೊನೆಯದಾಗಿ,** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು, ಚಾಸಾ.1 ರವರು ಪ್ರಚೋದನೆಗೊಂಡು ಸಾರ್ವಜನಿಕ ಶಾಂತಿಗೆ ಭಂಗ ಉಂಟು ಮಾಡಲಿ ಎಂದು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಈ ಒಂದು ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

(ಮೇಲೆ ಹೇಳಿದ ದೋಷಾರೋಪಣೆಗಾಗಿ ನೀವು ಈ ನ್ಯಾಯಾಲಯದ ಮುಂದೆ ವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.)

07.01.2025.

ಸಂಕೇಶ್ವರ
07.01.2025.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಸಂಕೇಶ್ವರ.

## <u>ಪ್ರಧಾನ ಸಿವಿಲ್ ಮತ್ತು ಜೆಎಂಎಫಸಿ ನ್ಯಾಯಾಧೀಶರ ನ್ಯಾಯಾಲಯ, ಸಂಕೇಶ್ವರ</u>

## <u>ಸಿ.ಸಿ. ಸಂಖ್ಯೆ:1904/2022</u>

**<u>ಪಿರ್ಯಾದಿ</u>** : ಸಂಕೇಶ್ವರ ಪೋಲೀಸ್ ಠಾಣೆ

**ವಿರುದ್ಧ**

**<u>ಆರೋಪಿ</u>** : ಮಲ್ಲಿಕಾರ್ಜುನ ಪರಶುರಾಮ ಕೆರೂರ.

ಮಲ್ಲಿಕಾರ್ಜುನ ಪರಶುರಾಮ ಕೆರೂರ. ವಃ 34 ವರ್ಷ, ಉಃ ಡೋಬಿ ಕೆಲಸ,
ವಾಸಃ ಅನಂತ ವಿದ್ಯಾನಗರ, ಸಂಕೇಶ್ವರ,
ತಾಃ ಹುಕ್ಕೇರಿ, ಜಿಃ ಬೆಳಗಾವಿ.

**<u>ದೋಷಾರೋಪಣೆ</u>**

ಪ್ರಶ್ನೆ - 1:-ಈ ಮೇಲೆ ಓದಿ ಹೇಳಿದ ಅಪಾಧನೆಯನ್ನು ಕೇಳಿದಿಯಾ? ಅದು ನಿನಗೆ ಅರ್ಥವಾಯಿತೇ?
ಉಃ-

ಪ್ರಶ್ನೆ - 2:-ಈ ಮೇಲಿನ ಅಪಾಧನೆಯನ್ನು ಒಪ್ಪಿಕೊಳ್ಳುತ್ತೀಯೋ ಅಥವಾ ಏನಾದರೂ ಹೇಳುವುದಿದೆಯಾ ?
ಉಃ-

(ನಾನು ಈ ಮೂಲಕ ದೃಢೀಕರಿಸುವುದೇನೆಂದರೆ, ಆರೋಪಿಗೆ ಕನ್ನಡ ಭಾಷೆಯಲ್ಲಿ ಅವರ ವಿರುದ್ಧ ಮಾಡಲಾದ ಆರೋಪಣೆಯನ್ನು ಓದಿ ಹೇಳಿ ವಿವರಿಸಿ, ಅವರು ಅದನ್ನು ಅರ್ಥ ಮಾಡಿಕೊಂಡಿರುತ್ತಾರೆ ಎಂದು ಮನಗಂಡು, ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ಮತ್ತು ಸರಿಯಾಗಿ ದಾಖಲಿಸಿಕೊಂಡಿರುತ್ತೇನೆ.)

ದಿನಾಂಕ:07.01.2025.
ಸ್ಥಳ : ಸಂಕೇಶ್ವರ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಸಂಕೇಶ್ವರ.